KAMD310022182024

**2** ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ**,** ಮದ್ದೂರು**.**

ಉಪಸ್ಥಿತರು **:-** ಶ್ರೀಮತಿ ನಂದಿನಿ ಎಸ್**.**ಆರ್**.,** ಬಿ**.**ಎ**.,** ಎಲ್**.**ಎಲ್**.**ಬಿ**.,**
**2** ನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ**.**ಎಂ**.**ಎಫ್**.**ಸಿ**.,** ಮದ್ದೂರು**.**

ದಿನಾಂಕ **1** ನೇ ಜುಲೈ **2026**

<u>ಸಿ**.**ಸಿ**.** ನಂ**.1249/2024**</u>

| | | |
|---|---|---|
| ಪಿರ್ಯಾದುದಾರರು | **:** | ಸರ್ಕಾರದ ಪರವಾಗಿ<br>ಮದ್ದೂರು ಪೊಲೀಸರು<br><br>**(**ಪ್ರತಿನಿಧಿಸುವವರು ಮಾನ್ಯ<br>ಸಹಾಯಕ ಸರ್ಕಾರಿ ಅಭಿಯೋಜಕರು**)** |
| | | <u>ವಿರುದ್ಧ</u> |
| ಆರೋಪಿ | **:** | ಶಶಿಕುಮಾರ್ ಎನ್.ಟಿ.<br>ಬಿನ್ ಲೇಟ್ ತಿಮ್ಮೇಗೌಡ<br>26 ವರ್ಷ, ಅಣ್ಣಾಳ್ಳಿದೊಡ್ಡಿ ಗ್ರಾಮ<br>ಮದ್ದೂರು ತಾಃ<br>ಸ್ವಂತ ಊರು-ನುಣ್ಣೂರು ಗ್ರಾಮ<br>ಚನ್ನಪಟ್ಟಣ ತಾಃ, ರಾಮನಗರ ಜಿಲ್ಲೆ |

**(**ಆರೋಪಿ ಪರ ಶ್ರೀ ಎಂ**.**ಎಂ**.** ವಕೀಲರು ವಕೀಲರು**)**

ವೃತ್ತ ನಿರೀಕ್ಷಕರು, ಮದ್ದೂರು ಪೊಲೀಸ್ ಠಾಣೆಯವರು ಆರೋಪಿಯ ವಿರುದ್ಧ ಭಾರತೀಯ ದಂಡ ಸಂಹಿತೆ ಕಲಂ 279, 337, 304(ಎ)ರಡಿಯಲ್ಲಿ ದೋಷಾರೋಪಣಾಪಟ್ಟಿಯನ್ನು ಸಲ್ಲಿಸಿರುತ್ತಾರೆ.

2. <u>ಅಭಿಯೋಜನಾ ಪ್ರಕರಣದ ಸಂಕ್ಷಿಪ್ತ ಸಾರಾಂಶ ಈ ಕೆಳ ಕಂಡಂತೆ ಇರುತ್ತದೆ:</u>

ದಿನಾಂಕ 17-04-2024 ರಂದು ರಾತ್ರಿ 11-30 ಗಂಟೆ ಸಮಯದಲ್ಲಿ ಮದ್ದೂರು ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ ಮದ್ದೂರು ತಾಲ್ಲೂಕು, ಕೂಳಗೆರೆ ಗ್ರಾಮದ ಗೇಟ್ ಮುಂದೆಯಾದಂತೆ ಸರ್ಕಾರಿ ಪ್ರೌಢಶಾಲೆಯ ಮುಂಭಾಗದಲ್ಲಿ ಹಾದು ಹೋಗಿರುವ ಹಲಗೂರು-ರುದ್ರಾಕ್ಷಿಪುರ ಮುಖ್ಯ ರಸ್ತೆಯಲ್ಲಿ ಆರೋಪಿ ತನ್ನ ಬಾಬ್ತು ಕೆಎ-11-ಇವಿ-4945 ಸಂಖ್ಯೆಯ ಬಜಾಜ್ ಪಲ್ಸರ್-220 ಮೋಟಾರ್ ಸೈಕಲ್ ನಲ್ಲಿ ಚಾಸಾ.3 ರವರನ್ನು ಕೂರಿಸಿಕೊಂಡು ಕೆ. ಬೆಳ್ಳೂರು ಕಡೆಯಿಂದ ಇಗ್ಗಲೂರು ಕಡೆಗಾದಂತೆ ಸಾರ್ವಜನಿಕ ರಸ್ತೆಯಲ್ಲಿ ಅತಿ ವೇಗವಾಗಿ ಹಾಗೂ ಅಜಾಗರೂಕತೆಯಿಂದ ಮಾನವನ ಜೀವಕ್ಕೆ ಅಪಾಯವುಂಟುಮಾಡುವ ರೀತಿಯಲ್ಲಿ ಚಾಲನೆ ಮಾಡಿಕೊಂಡು ಹೋಗಿ ಮೃತ ಸಿದ್ದರಾಜುರವರು ಹೋಗುತ್ತಿದ್ದ ಕೆಎ-43-ಹೆಚ್-2425 ಸಂಖ್ಯೆಯ ಹಿರೋ ಪ್ಯಾಷನ್ ಪ್ಲಸ್ ಮೋಟಾರು ಸೈಕಲ್ ಗೆ ಮುಖಾಮುಖಿ ಡಿಕ್ಕಿ ಮಾಡಿದಾಗ ಮೋಟಾರ್ ಸೈಕಲ್ ನಿಂದ ಇಬ್ಬರು ರಸ್ತೆಯ ಮೇಲೆ ಬಿದ್ದ ಪರಿಣಾಮ, ಸಿದ್ದರಾಜುರವರ ತಲೆ ಹಾಗೂ ಬಲಗೈಗೆ ರಕ್ತಗಾಯವಾಗಿದ್ದು, ಆರೋಪಿಯ ತಲೆ ಹಾಗೂ ಮುಖಕ್ಕೆ ಮತ್ತು ಆರೋಪಿಯ ಬೈಕಿನ ಹಿಂಬದಿಯ ಸವಾರ ಚಾಸಾ.3 ರವರ ತಲೆಗೆ ಸಾಮಾನ್ಯ ಸ್ವರೂಪದ ಗಾಯಗಳುಂಟಾಗಿದ್ದು, ಸಿದ್ದರಾಜುರವರನ್ನು ಮಂಡ್ಯ ಮಿಮ್ಸ್ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿದ್ದು, ನಂತರ ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಿದರೂ ಚಿಕಿತ್ಸೆ ಫಲಕಾರಿಯಾಗದೆ ದಿನಾಂಕ 20-04-2024 ರಂದು ರಾತ್ರಿ 9-27 ಗಂಟೆಯಲ್ಲಿ ಸಿದ್ದರಾಜುರವರು ಮೃತಪಟ್ಟಿರುತ್ತಾರೆಂದು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತಾರೆ.

3. ಆರೋಪಿಯ ವಿರುದ್ಧ ದೋಷಾರೋಪಣಾ ಪತ್ರ ಸಲ್ಲಿಸಿದ ನಂತರ, ಆರೋಪಣಾ ಸಂಜ್ಞೇಯವನ್ನು ತೆಗೆದುಕೊಳ್ಳಲಾಯಿತು. ಆರೋಪಿಯು ನ್ಯಾಯಾಲಯದ ಜಾಮೀನಿನ ಮೇಲೆ ಬಿಡುಗಡೆಯಾಗಿದ್ದು, ಆರೋಪಿಗೆ ದಂಡ ಪ್ರಕ್ರಿಯಾ ಸಂಹಿತೆಯ ಕಲಂ 207 ರಡಿಯಲ್ಲಿ ದೋಷಾರೋಪಣಾ ಪತ್ರದ ನಕಲುಗಳನ್ನು ಪೂರೈಸಲಾಯಿತು. ತದನಂತರ ಆರೋಪಿಯ ವಿರುದ್ಧ ಆಪಾದನೆಯನ್ನು ರಚಿಸಿ ಅವರಿಗೆ ಓದಿ ಹೇಳಿ ವಿವರಿಸಲಾಗಿ, ಆರೋಪಿಯು ತಾನು ತಪ್ಪು ಮಾಡಿಲ್ಲವೆಂದು ಹೇಳಿದ್ದರಿಂದ ಪ್ರಕರಣವನ್ನು ಸಾಕ್ಷಿದಾರರ ವಿಚಾರಣೆಗಾಗಿ ಹಾಕಿಕೊಳ್ಳಲಾಗಿತ್ತು.

4. ಆರೋಪಿಯ ವಿರುದ್ಧದ ಆರೋಪವನ್ನು ರುಜುವಾತುಪಡಿಸುವ ಸಲುವಾಗಿ ಅಭಿಯೋಜನೆಯವರು ತಮ್ಮ ಪರವಾಗಿ ದೋಷಾರೋಪಣಾ ಪತ್ರದಲ್ಲಿ ಒಟ್ಟು 21 ಜನ

ಸಾಕ್ಷಿದಾರರನ್ನು ತೋರಿಸಲಾಗಿದ್ದು, ಚಾಸಾ-1 ರಿಂದ 4, 19 ಮತ್ತು 21 ರವರನ್ನು ಪ್ರಾಸಾ-1 ರಿಂದ 6 ಎಂದು ಹಾಜರುಪಡಿಸಿ ವಿಚಾರಣೆ ಮಾಡಿರುತ್ತಾರೆ ಮತ್ತು ನಿಪಿ-1 ರಿಂದ ನಿಪಿ-22 ದಾಖಲೆಗಳನ್ನು ಹಾಜರುಪಡಿಸಿ ಗುರುತಿಸಿಕೊಂಡಿರುತ್ತಾರೆ. ಉಳಿದ ಸಾಕ್ಷಿದಾರರನ್ನು ವಿಚಾರಣೆ ಮಾಡುವುದರಿಂದ ಅಭಿಯೋಜನೆಗೆ ಯಾವುದೇ ಪ್ರಯೋಜನವಾಗದಿರುವುದನ್ನು ಮನಗಂಡು ಸಹಾಯಕ ಸರ್ಕಾರಿ ಅಭಿಯೋಜಕರು ಉಳಿದ ಸಾಕ್ಷಿದಾರರ ವಿಚಾರಣೆಯನ್ನು ವಿಚಾರಣಾ ಹಂತದಿಂದ ಕೈಬಿಟ್ಟು ಅಭಿಯೋಜನೆ ಪರ ವಿಚಾರಣೆ ಮುಕ್ತಾಯಗೊಳಿಸಿರುತ್ತಾರೆ.

5. ಈ ಪ್ರಕರಣದ ವಿಚಾರಣೆ ಮುಗಿದ ನಂತರ ಆರೋಪಿಗೆ ದಂಡ ಪ್ರಕ್ರಿಯಾ ಸಂಹಿತೆ ಕಲಂ.313 ರಡಿಯಲ್ಲಿ ಅವರ ವಿರುದ್ಧದ ಅಭಿಯೋಜನಾ ಪಕ್ಷದ ಮೌಖಿಕ ಹಾಗೂ ದಾಖಲೆಗಳ ಸಾಕ್ಷ್ಯದ ಬಗ್ಗೆ ಪ್ರಶ್ನಿಸಲಾಗಿ, ಆರೋಪಿಯು ಅಭಿಯೋಜನೆ ಸಾಕ್ಷ್ಯವನ್ನು ಸಂಪೂರ್ಣವಾಗಿ ಅಲ್ಲಗಳೆದಿದ್ದು ತನ್ನ ಪರವಾಗಿ ಯಾವುದೇ ಸಾಕ್ಷ್ಯ ಮತ್ತು ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ.

6. ಆರೋಪಿಯನ್ನು ದಂಡ ಪ್ರಕ್ರಿಯಾ ಸಂಹಿತೆ ಕಲಂ 313 ರಡಿಯಲ್ಲಿ ವಿಚಾರಣೆ ಮಾಡಿದ ನಂತರ ಆರೋಪಿಗೆ ದಂಡ ಪ್ರಕ್ರಿಯಾ ಸಂಹಿತೆ ಕಲಂ.437(ಎ)ರಡಿಯಲ್ಲಿನ ಪ್ರಕ್ರಿಯೆಯಂತೆ ಜಾಮೀನಿನ ಭದ್ರತೆಯನ್ನು ನೀಡಿರುತ್ತಾರೆ.

7. ಉಭಯ ಪಕ್ಷಗಳ ವಾದ ವಿವಾದಗಳನ್ನು ಕೇಳಲಾಯಿತು.

8. ನ್ಯಾಯಾಲಯದಲ್ಲಿ ಇರುವ ಸಂಪೂರ್ಣವಾದ ಮೌಖಿಕ ಹಾಗೂ ದಸ್ತಾವೇಜು ಸಾಕ್ಷ್ಯಗಳನ್ನು ಪರಿಶೀಲಿಸಿದ ನಂತರ ಪ್ರಕರಣದ ಇತ್ಯರ್ಥಕ್ಕೆ ಈ ಕೆಳಕಂಡ ಅಂಶಗಳು ಉದ್ಭವಿಸಿರುತ್ತದೆ.

<u>ಅಂಶಗಳು</u>

<u>ಅಂಶ.**1:**</u> ದಿನಾಂಕ 17-04-2024 ರಂದು ರಾತ್ರಿ 11-30 ಗಂಟೆ ಸಮಯದಲ್ಲಿ ಮದ್ದೂರು ಪೊಲೀಸ್ ಠಾಣಾ ಸರಹದ್ದಿಗೆ ಸೇರಿದ ಮದ್ದೂರು ತಾಲ್ಲೂಕು, ಕೂಳಗೆರೆ ಗ್ರಾಮದ ಗೇಟ್ ಮುಂದೆಯಾದಂತೆ ಸರ್ಕಾರಿ ಪ್ರೌಢಶಾಲೆಯ ಮುಂಭಾಗದಲ್ಲಿ ಹಾದು ಹೋಗಿರುವ ಹಲಗೂರು-ರುದ್ರಾಕ್ಷಿಪುರ ಮುಖ್ಯ ರಸ್ತೆಯಲ್ಲಿ ಆರೋಪಿ ತನ್ನ ಬಾಬ್ತು ಕೆಎ-11-ಇವಿ-4945 ಸಂಖ್ಯೆಯ ಬಜಾಜ್ ಪಲ್ಸರ್-220 ಮೋಟಾರ್ ಸೈಕಲ್ ನಲ್ಲಿ ಚಾಸಾ.3 ರವರನ್ನು ಕೂರಿಸಿಕೊಂಡು ಕೆ. ಬೆಳ್ಳೂರು ಕಡೆಯಿಂದ ಇಗ್ಗಲೂರು ಕಡೆಗಾದಂತೆ ಸಾರ್ವಜನಿಕ ರಸ್ತೆಯಲ್ಲಿ ಅತಿ ವೇಗವಾಗಿ ಹಾಗೂ ಅಜಾಗರೂಕತೆಯಿಂದ ಮಾನವನ ಜೀವಕ್ಕೆ ಅಪಾಯವುಂಟುಮಾಡುವ ರೀತಿಯಲ್ಲಿ ಚಾಲನೆ ಮಾಡಿಕೊಂಡು ಹೋಗಿದ್ದು, ಆ ಮೂಲಕ

ಆರೋಪಿಯು ಭಾ.ದಂ.ಸಂ. ಕಲಂ **279** ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿದ್ದಾರೆಂದು ಅಭಿಯೋಜನಾ ಪಕ್ಷದವರು ನಿಸ್ಸಂಶಯವಾಗಿ ಯಾವುದೇ ಸಂದೇಹಕ್ಕೆ ಆಸ್ಪದವಿಲ್ಲದಂತೆ ರುಜುವಾತುಪಡಿಸುವರೇ**?**

2. ಅದೇ ದಿನ, ಅದೇ ವೇಳೆ ಹಾಗೂ ಅದೇ ಸ್ಥಳದಲ್ಲಿ, ಆರೋಪಿ ತನ್ನ ಬಾಬ್ತು ಮೋಟಾರು ಸೈಕಲನ್ನು ಅತಿ ವೇಗವಾಗಿ ಹಾಗೂ ಅಜಾಗರೂಕತೆಯಿಂದ ಮಾನವ ಜೀವಕ್ಕೆ ಅಪಾಯವುಂಟುಮಾಡುವ ರೀತಿಯಲ್ಲಿ ಚಾಲನೆ ಮಾಡಿಕೊಂಡು ಹೋಗಿ ಮೃತ ಸಿದ್ದರಾಜುರವರು ಹೋಗುತ್ತಿದ್ದ ಕೆಎ-43 ಹೆಚ್-2425 ಸಂಖ್ಯೆಯ ಹಿರೋ ಪ್ಯಾಷನ್ ಪ್ಲಸ್ ಮೋಟಾರು ಸೈಕಲ್ ಗೆ ಮುಖಾಮುಖಿ ಡಿಕ್ಕಿ ಮಾಡಿದಾಗ, ಮೋಟಾರು ಸೈಕಲ್ ನಿಂದ ಇಬ್ಬರು ರಸ್ತೆಯ ಮೇಲೆ ಬಿದ್ದ ಪರಿಣಾಮ, ಆರೋಪಿಯ ತಲೆ ಹಾಗೂ ಮುಖಕ್ಕೆ ಮತ್ತು ಆರೋಪಿಯ ಬೈಕಿನ ಹಿಂಬದಿಯ ಸವಾರ ಚಾಸಾ.3 ರವರ ತಲೆಗೆ ಸಾಮಾನ್ಯ ಸ್ವರೂಪದ ಗಾಯಗಳುಂಟಾಗಿದ್ದು, ಆ ಮೂಲಕ ಆರೋಪಿಯು ಭಾ.ದಂ.ಸಂ. ಕಲಂ **337** ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿದ್ದಾರೆಂದು ಅಭಿಯೋಜನಾ ಪಕ್ಷದವರು ನಿಸ್ಸಂಶಯವಾಗಿ ಯಾವುದೇ ಸಂದೇಹಕ್ಕೆ ಆಸ್ಪದವಿಲ್ಲದಂತೆ ರುಜುವಾತುಪಡಿಸುವರೇ**?**

3. ಅದೇ ದಿನ, ಅದೇ ವೇಳೆ ಹಾಗೂ ಅದೇ ಸ್ಥಳದಲ್ಲಿ, ಆರೋಪಿ ತನ್ನ ಬಾಬ್ತು ಮೋಟಾರು ಸೈಕಲನ್ನು ಅತಿ ವೇಗವಾಗಿ ಹಾಗೂ ಅಜಾಗರೂಕತೆಯಿಂದ ಮಾನವ ಜೀವಕ್ಕೆ ಅಪಾಯವುಂಟುಮಾಡುವ ರೀತಿಯಲ್ಲಿ ಚಾಲನೆ ಮಾಡಿಕೊಂಡು ಹೋಗಿ ಮೃತ ಸಿದ್ದರಾಜುರವರು ಹೋಗುತ್ತಿದ್ದ ಕೆಎ-43 ಹೆಚ್-2425 ಸಂಖ್ಯೆಯ ಹಿರೋ ಪ್ಯಾಷನ್ ಪ್ಲಸ್ ಮೋಟಾರು ಸೈಕಲ್ ಗೆ ಮುಖಾಮುಖಿ ಡಿಕ್ಕಿ ಮಾಡಿದಾಗ ಸಿದ್ದರಾಜುರವರ ತಲೆ ಹಾಗೂ ಬಲಗೈಗೆ ರಕ್ತಗಾಯವಾಗಿದ್ದು, ಸಿದ್ದರಾಜುರವರನ್ನು ಮಂಡ್ಯ ಮಿಮ್ಸ್ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ಕೊಡಿಸಿದ್ದು, ನಂತರ ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ ಕೊಡಿಸಿದರೂ ಚಿಕಿತ್ಸೆ ಫಲಕಾರಿಯಾಗದೆ ದಿನಾಂಕ 20-04-2024 ರಂದು ರಾತ್ರಿ 9-27 ಗಂಟೆಯಲ್ಲಿ ಸಿದ್ದರಾಜುರವರು ಮೃತಪಟ್ಟಿದ್ದು, ಆ ಮೂಲಕ ಆರೋಪಿಯು ಭಾ.ದಂ.ಸಂ. ಕಲಂ **304(**ಎ**)**ರಡಿಯಲ್ಲಿ ಶಿಕ್ಷಾರ್ಹ ಅಪರಾಧ ಎಸಗಿದ್ದಾರೆಂದು ಅಭಿಯೋಜನಾ ಪಕ್ಷದವರು ನಿಸ್ಸಂಶಯವಾಗಿ ಯಾವುದೇ ಸಂದೇಹಕ್ಕೆ ಆಸ್ಪದವಿಲ್ಲದಂತೆ ರುಜುವಾತುಪಡಿಸುವರೇ**?**

<u>ಅಂಶ**.4:**</u> ಯಾವ ಆದೇಶ?

9. ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಹಾಗೂ ಆರೋಪಿ ಪರ ವಕೀಲರ ವಾದ ಮತ್ತು ಪ್ರತಿವಾದಗಳನ್ನು ಆಲಿಸಿ ನ್ಯಾಯಾಲಯದ ಮುಂದಿರುವ ಸಂಪೂರ್ಣ ಮೌಖಿಕ

ಹಾಗೂ ದಸ್ತಾವೇಜು ದಾಖಲೆಗಳನ್ನು ಪರಿಶೀಲಿಸಿದ ನಂತರ ನಾನು ಈ ಮೇಲ್ಕಂಡ ಅಂಶಗಳಿಗೆ ಈ ಕೆಳಕಂಡಂತೆ ಉತ್ತರಿಸಿರುತ್ತೇನೆ.

ಅಂಶ-1: ನಕಾರಾತ್ಮಕವಾಗಿ
ಅಂಶ-2: ನಕಾರಾತ್ಮಕವಾಗಿ
ಅಂಶ-3: ನಕಾರಾತ್ಮಕವಾಗಿ
ಅಂಶ-4: ಅಂತಿಮ ಆದೇಶದಂತೆ,
ಈ ಕೆಳಗಿನ ಕಾರಣಗಳಿಗಾಗಿ;

ಕಾರಣಗಳು

10. ಅಂಶ **1** ರಿಂದ **3:** ಈ ಅಂಶಗಳು ಒಂದಕ್ಕೊಂದು ಆಂತರಿಕ ಸಂಬಂಧ ಹೊಂದಿರುವುದರಿಂದ ಹಾಗೂ ವಸ್ತುಸ್ಥಿತಿ ಮತ್ತು ಕಾರಣಗಳ ಪುನರಾವರ್ತನೆಯನ್ನು ತಪ್ಪಿಸುವ ಸಲುವಾಗಿ ಈ ಅಂಶಗಳನ್ನು ಒಟ್ಟಿಗೆ ಚರ್ಚೆಗೆ ತೆಗೆದುಕೊಳ್ಳಲಾಗಿದೆ.

11. ಭಾ.ದಂ.ಸಂ. ಕಲಂ 279, 337 ಮತ್ತು 304-ಎರಡಿಯಲ್ಲಿನ ಆಪಾದನೆಯನ್ನು ರುಜುವಾತುಪಡಿಸಲು ಅಭಿಯೋಜನೆಯು ಸದರಿ ಅಪಘಾತಕ್ಕೆ ಆರೋಪಿಯ ಅತಿವೇಗ, ಅಜಾಗರೂಕತೆ ಮತ್ತು ನಿರ್ಲಕ್ಷತನದ ವಾಹನದ ಚಾಲನೆ ಕಾರಣ ಎಂದು ಮತ್ತು ಮುಖ್ಯವಾಗಿ ಅಪಘಾತದ ನೇರ ಪರಿಣಾಮದಿಂದ ಸಿದ್ದರಾಜು ಎಂಬುವರ ಸಾವಿನಲ್ಲಿ ಕೊನೆಗೊಂಡಿದೆ ಎಂಬುದನ್ನು ನಿರೂಪಿಸಬೇಕಾಗಿರುತ್ತದೆ.

12. ಪ್ರಸ್ತುತ ಪ್ರಕರಣದಲ್ಲಿ ಆರೋಪಿಯ ವಿರುದ್ಧ ಆರೋಪಿಸಲಾದ ಆರೋಪಗಳನ್ನು ರುಜುವಾತುಪಡಿಸುವ ನಿಟ್ಟಿನಲ್ಲಿ ಅಭಿಯೋಜನೆಯು ಒಟ್ಟು 6 ಜನ ಸಾಕ್ಷಿದಾರರುಗಳನ್ನು ಪ್ರಾಸಾ.1 ರಿಂದ ಪ್ರಾಸಾ.6 ಎಂದು ವಿಚಾರಣೆಗೆ ಒಳಪಡಿಸಿದ್ದು, ನಿಪಿ.1 ರಿಂದ ನಿಪಿ.22 ದಾಖಲೆಗಳನ್ನು ಗುರುತಿಸಿಕೊಂಡಿರುತ್ತಾರೆ.

13. ಅಭಿಯೋಜನಾ ಪಕ್ಷದವರು ಪ್ರಕರಣವನ್ನು ಸಾಬೀತುಪಡಿಸುವ ಉದ್ದೇಶದಿಂದ ಈ ಪ್ರಕರಣದ ಪಿರ್ಯಾದುದಾರರಾದ ಚಾಸಾ.1 ಸಣ್ಣಮ್ಮರವರನ್ನು ಪ್ರಾಸಾ.1 ಎಂದು ವಿಚಾರಣೆ ಮಾಡಿದ್ದು, ಇವರು ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ, ಮೃತ ಸಿದ್ದರಾಜು ತನ್ನ ಮಗ, ಸುಮಾರು ಎರಡು ವರ್ಷಗಳ ಹಿಂದೆ ತನ್ನ ಮಗ ರಸ್ತೆಯ ಅಪಘಾತದಲ್ಲಿ ಕೆ. ಬೆಳ್ಳೂರು ಗ್ರಾಮದ ಬಳಿ ಮೃತಪಟ್ಟಿರುತ್ತಾರೆ. ತನ್ನ ಮಗನಿಗೆ ಯಾರು ಅಪಘಾತಪಡಿಸಿದ್ದರು, ಯಾವ ರೀತಿ ಅಪಘಾತವಾಯಿತೆಂದು ತನಗೆ ಗೊತ್ತಿಲ್ಲ, ನಿಪಿ.1 ಮತ್ತು 2 ಕ್ಕೆ ಪೊಲೀಸರ ಕೋರಿಕೆಯ ಮೇರೆಗೆ ಹೆಬ್ಬೆಟ್ಟು ಗುರುತನ್ನು ಹಾಕಿದ್ದು, ಸದರಿ ದಾಖಲೆಗಳಲ್ಲಿ ಪೊಲೀಸರು ಏನು ಬರೆದಿದ್ದಾರೆಂದು

ತನಗೆ ಗೊತ್ತಿಲ್ಲವೆಂದು ಅಭಿಯೋಜನಾ ಪಕ್ಷದ ಪ್ರಕರಣಕ್ಕೆ ಪ್ರತಿಕೂಲ ಸಾಕ್ಷ್ಯವನ್ನು ನುಡಿದಿರುತ್ತಾರೆ. ಇವರನ್ನು ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಪಾಟೀ ಸವಾಲಿಗೆ ಒಳಪಡಿಸಿದರೂ ಸಹ ಅಭಿಯೋಜನಾ ಪಕ್ಷದ ಪ್ರಕರಣಕ್ಕೆ ಪೂರಕವಾದ ಯಾವುದೇ ಅಂಶವನ್ನು ಹೊರತರುವಲ್ಲಿ ಅಭಿಯೋಜನಾ ಪಕ್ಷದವರು ವಿಫಲರಾಗಿರುತ್ತಾರೆ.

14. ನಂತರ ಅಭಿಯೋಜನೆಯವರು ಆರೋಪಿಯ ವಿರುದ್ಧ ಮಾಡಿರುವ ಆರೋಪಗಳನ್ನು ರುಜುವಾತುಪಡಿಸುವ ಸಲುವಾಗಿ ಈ ಪ್ರಕರಣದಲ್ಲಿ ಗಾಯಾಳು ಹಾಗೂ ಪ್ರತ್ಯಕ್ಷ ಸಾಕ್ಷಿದಾರರಾದ ಚಾಸಾ.3 ನಿಶಾಂತ್ ರವರನ್ನು ಪ್ರಾಸಾ.5 ಎಂದು ವಿಚಾರಣೆ ಮಾಡಿದ್ದು ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ಮೃತ ಸಿದ್ದರಾಜು ಹಾಗೂ ಆರೋಪಿ ತನಗೆ ಗೊತ್ತಿಲ್ಲ, ಸುಮಾರು ಎರಡು ವರ್ಷಗಳ ಹಿಂದೆ ಮದ್ದೂರಿನ ಬಳಿ ಅಪಘಾತವಾಗಿದ್ದು, ಸದರಿ ಅಪಘಾತ ಯಾರ ತಪ್ಪಿನಿಂದ ಯಾವ ರೀತಿ ಆಯಿತೆಂದು ತನಗೆ ನೆನಪಿಲ್ಲ, ತನಗೆ ಸಣ್ಣಪುಟ್ಟ ಗಾಯಗಳಾಗಿದ್ದು, ಪೊಲೀಸರ ಮುಂದೆ ಯಾವುದೇ ಹೇಳಿಕೆ ಮತ್ತು ಮುಂದುವರೆದ ಹೇಳಿಕೆ ನೀಡಿಲ್ಲವೆಂದು ಅಭಿಯೋಜನಾ ಪಕ್ಷದ ಪ್ರಕರಣಕ್ಕೆ ಪ್ರತಿಕೂಲ ಸಾಕ್ಷ್ಯವನ್ನು ನುಡಿದಿರುತ್ತಾರೆ. ಇವರನ್ನು ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಪಾಟೀ ಸವಾಲಿಗೆ ಒಳಪಡಿಸಿದರೂ ಸಹ ಅಭಿಯೋಜನಾ ಪಕ್ಷದ ಪ್ರಕರಣಕ್ಕೆ ಪೂರಕವಾದ ಯಾವುದೇ ಅಂಶವನ್ನು ಹೊರತರುವಲ್ಲಿ ಅಭಿಯೋಜನಾ ಪಕ್ಷದವರು ವಿಫಲರಾಗಿರುತ್ತಾರೆ.

15. ನಂತರ ಅಭಿಯೋಜನೆಯವರು ಆರೋಪಿಯ ವಿರುದ್ಧ ಮಾಡಿರುವ ಆರೋಪಗಳನ್ನು ರುಜುವಾತುಪಡಿಸುವ ಸಲುವಾಗಿ ಈ ಪ್ರಕರಣದ ಪ್ರತ್ಯಕ್ಷದರ್ಶಿಯಾದ ಚಾಸಾ.2 ಭರತೇಶರವರನ್ನು ಪ್ರಾಸಾ.3 ಎಂದು ವಿಚಾರಣೆ ಮಾಡಿಕೊಂಡಿದ್ದು ಇವರು ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ, ಸಿದ್ದರಾಜುರವರು ಸುಮಾರು 2 ವರ್ಷಗಳ ಹಿಂದೆ ರಸ್ತೆ ಅಪಘಾತದಲ್ಲಿ ಕೆ. ಬೆಳ್ಳೂರು ಗ್ರಾಮದ ಬಳಿ ಮೃತಪಟ್ಟಿರುತ್ತಾರೆ. ಸದರಿಯವರಿಗೆ ಯಾರು, ಯಾವ ರೀತಿ ಅಪಘಾತಪಡಿಸಿರುತ್ತಾರೆಂದು ತನಗೆ ಗೊತ್ತಿಲ್ಲ, ತಾನು ಅಪಘಾತವನ್ನು ನೋಡಿಲ್ಲ, ಗಾಯಾಳುವನ್ನು ಉಪಚರಿಸಿಲ್ಲ, ಪೊಲೀಸರಿಗೆ ಯಾವುದೇ ಹೇಳಿಕೆ ಹಾಗೂ ಮುಂದುವರೆದ ಹೇಳಿಕೆ ನೀಡಿಲ್ಲವೆಂದು ಅಭಿಯೋಜನಾ ಪಕ್ಷದ ಪ್ರಕರಣಕ್ಕೆ ಪ್ರತಿಕೂಲ ಸಾಕ್ಷ್ಯವನ್ನು ನುಡಿದಿರುತ್ತಾರೆ. ಇವರನ್ನು ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಪಾಟೀ ಸವಾಲಿಗೆ ಒಳಪಡಿಸಿದರೂ ಸಹ ಅಭಿಯೋಜನಾ ಪಕ್ಷದ ಪ್ರಕರಣಕ್ಕೆ ಪೂರಕವಾದ ಯಾವುದೇ ಅಂಶವನ್ನು ಹೊರತರುವಲ್ಲಿ ಅಭಿಯೋಜನಾ ಪಕ್ಷದವರು ವಿಫಲರಾಗಿರುತ್ತಾರೆ.

16. ನಂತರ ಅಭಿಯೋಜನೆಯವರು ಆರೋಪಿಯ ವಿರುದ್ಧ ಮಾಡಿರುವ ಆರೋಪಗಳನ್ನು ರುಜುವಾತುಪಡಿಸುವ ಸಲುವಾಗಿ ಈ ಪ್ರಕರಣದ ಪ್ರತ್ಯಕ್ಷ ಸಾಕ್ಷಿದಾರರು ಹಾಗೂ ಗಾಯಾಳುವನ್ನು ಉಪಚರಿಸಿದ ಸಾಕ್ಷಿದಾರರಾದ ಚಾಸಾ.4 ಅಭಿಷೇಕ್ ರವರನ್ನು ಪ್ರಾಸಾ.6 ಎಂದು ವಿಚಾರಣೆ ಮಾಡಿದ್ದು ಇವರು ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ, ಮೃತ ಸಿದ್ದರಾಜು ಹಾಗೂ ಆರೋಪಿ ತನಗೆ ಗೊತ್ತಿಲ್ಲ, ತಾನು ಯಾವುದೇ ಅಪಘಾತವನ್ನು ನೋಡಿಲ್ಲ, ಗಾಯಾಳುವನ್ನು ಉಪಚರಿಸಿಲ್ಲ, ಪೊಲೀಸರ ಮುಂದೆ ಯಾವುದೇ ಹೇಳಿಕೆ ಮತ್ತು ಮುಂದುವರೆದ ಹೇಳಿಕೆ ನೀಡಿಲ್ಲವೆಂದು ಅಭಿಯೋಜನಾ ಪಕ್ಷದ ಪ್ರಕರಣಕ್ಕೆ ಪ್ರತಿಕೂಲ ಸಾಕ್ಷ್ಯವನ್ನು ನುಡಿದಿರುತ್ತಾರೆ. ಇವರನ್ನು ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಪಾಟೀ ಸವಾಲಿಗೆ ಒಳಪಡಿಸಿದರೂ ಸಹ ಅಭಿಯೋಜನಾ ಪಕ್ಷದ ಪ್ರಕರಣಕ್ಕೆ ಪೂರಕವಾದ ಯಾವುದೇ ಅಂಶವನ್ನು ಹೊರತರುವಲ್ಲಿ ಅಭಿಯೋಜನಾ ಪಕ್ಷದವರು ವಿಫಲರಾಗಿರುತ್ತಾರೆ.

17. ನಂತರ ಅಭಿಯೋಜನೆಯವರು ಆರೋಪಿಯ ವಿರುದ್ಧ ಮಾಡಿರುವ ಆರೋಪಗಳನ್ನು ರುಜುವಾತುಪಡಿಸುವ ಸಲುವಾಗಿ ಈ ಪ್ರಕರಣದ ತನಿಖಾಧಿಕಾರಿಯಾದ ಚಾಸಾ.19 ಸಿದ್ದರಾಜು ಎಸ್ ರವರನ್ನು ಪ್ರಾಸಾ.2 ಎಂದು ವಿಚಾರಣೆ ಮಾಡಿದ್ದು, ಇವರು ತಮ್ಮ ಮುಖ್ಯ ವಿಚಾರಣಾ ಸಾಕ್ಷ್ಯದಲ್ಲಿ, ದಿನಾಂಕ 18-04-2024 ರಂದು ಮಧ್ಯಾಹ್ನ 1-15 ರ ಸಮಯದಲ್ಲಿ ತಾವು ಠಾಣಾ ಕರ್ತವ್ಯದಲ್ಲಿದ್ದಾಗ, ಚಾಸಾ-1 ರವರು ಠಾಣೆಗೆ ಹಾಜರಾಗಿ ನೀಡಿದ ಬೆರಳಚ್ಚು ದೂರನ್ನು ಸ್ವೀಕರಿಸಿ, ಪ್ರಕರಣ ದಾಖಲಿಸಿ, ಪ್ರಥಮ ವರ್ತಮಾನ ವರದಿಯನ್ನು ತಯಾರಿಸಿ, ಅದೇ ದಿನ ಮದ್ದೂರು ಪೊಲೀಸ್ ಠಾಣಾ ಆವರಣದಲ್ಲಿ ಚಾಸಾ.5 ಮತ್ತು 6 ರವರ ಸಮಕ್ಷಮ ಬೆಳಿಗ್ಗೆ 2-05 ರಿಂದ 3-00 ಗಂಟೆಯವರೆಗೆ ಅಮಾನತ್ತು ಮಹಜರ್ ಕ್ರಮ ಜರುಗಿಸಿ ಅಪಘಾತಕ್ಕೀಡಾದ ಬೈಕ್ ಗಳನ್ನು ಅಮಾನತ್ತುಪಡಿಸಿಕೊಂಡು, ನಂತರ ಮಾರನೇ ದಿನ ದಿನಾಂಕ 19-04-2024 ರಂದು ಚಾಸಾ.1 ರವರ ಸಮಕ್ಷಮ ಮಧ್ಯಾಹ್ನ 3-00 ರಿಂದ 4-00 ರವರೆಗೆ ಪಂಚರಾದ ಚಾಸಾ-5 ಮತ್ತು 7 ರವರ ಸಮಕ್ಷಮ ಸ್ಥಳ ಪಂಚನಾಮೆ ಕ್ರಮ ಜರುಗಿಸಿ, ನಂತರ ಪ್ರಕರಣದ ಕಡತವನ್ನು ಪಿ.ಎಸ್.ಐ. ರವರಿಗೆ ಹಸ್ತಾಂತರಿಸಿದ್ದಾಗಿ ಸಾಕ್ಷ್ಯ ನುಡಿದಿದ್ದಾರೆ.

18. ನಂತರ ಅಭಿಯೋಜನೆಯವರು ಆರೋಪಿಯ ವಿರುದ್ಧ ಮಾಡಿರುವ ಆರೋಪಗಳನ್ನು ರುಜುವಾತುಪಡಿಸುವ ಸಲುವಾಗಿ ಈ ಪ್ರಕರಣದ ದೋಷಾರೋಪಣಾ ಪಟ್ಟಿಯನ್ನು ತಯಾರಿಸಿದ ತನಿಖಾಧಿಕಾರಿಯಾದ ಚಾಸಾ.21 ಕೆ.ಆರ್. ಪ್ರಸಾದ್ ರವರನ್ನು ಪ್ರಾಸಾ.4 ಎಂದು ವಿಚಾರಣೆ ಮಾಡಿದ್ದು ಇವರು ತಮ್ಮ ಮುಖ್ಯ ವಿಚಾರಣೆಯಲ್ಲಿ, ದಿನಾಂಕ 21-04-2024 ರಂದು

ಪ್ರಕರಣದ ಕಡತವನ್ನು ಚಾಸಾ-19 ರವರಿಂದ ಪಡೆದು ಪರಿಶೀಲಿಸಿ, ದಿನಾಂಕ 22-04-2024 ರಂದು ಪಿ.ಎಂ. ವರದಿಯನ್ನು ಪಡೆದುಕೊಂಡು, ದಿನಾಂಕ 01-05-2024 ರಂದು ವಾಹನ ತಪಾಸಣೆ ಮಾಡುವಂತೆ ಕೋರಿ ಆರ್.ಟಿ.ಓ. ಮಂಡ್ಯ ರವರಿಗೆ ಮನವಿ ಪತ್ರ ಸಲ್ಲಿಸಿ, ಅದೇ ದಿನ ಅಪಘಾತವುಂಟುಮಾಡಿದ ಕೆಎ-10-ಇವಿ-4945 ಮೋಟಾರ್ ಸೈಕಲ್ ಆರ್ ಸಿ ಮಾಲೀಕರಾದ ಚಾಸಾ-12 ರವರಿಗೆ ಕಲಂ 133 ರಡಿ ನೋಟೀಸ್ ನೀಡಿ, ಉತ್ತರವನ್ನು ಮತ್ತು ದಾಖಲಾತಿಗಳನ್ನು ಪಡೆದುಕೊಂಡು, ದಿನಾಂಕ 02-05-2024 ರಂದು ಚಾಸಾ-12 ರವರಿಂದ ಇಂಡೆಮ್ನಿಟಿ ಬಾಂಡ್ ಪಡೆದು ವಾಹನವನ್ನು ಬಿಡುಗಡೆ ಮಾಡಿ, ಅದೇ ದಿನ ಆರೋಪಿಗೆ ಕಲಂ 41 ಎರಡಿಯಲ್ಲಿ ನೋಟೀಸ್ ನೀಡಿ, ದಿನಾಂಕ 03-05-2024 ರಂದು ಐ ಎಂ ವಿ ವರದಿಯನ್ನು, ದಿನಾಂಕ 20-05-2024 ರಂದು ಆರೋಪಿ ಚಾಲಕನ ಗಾಯದ ಪ್ರಮಾಣ ಪತ್ರವನ್ನು ಹಾಗೂ ದಿನಾಂಕ 30-05-2024 ರಂದು ಗಾಯಾಳು ಚಾಸಾ-3 ರವರ ಗಾಯದ ಪ್ರಮಾಣಪತ್ರವನ್ನು ಮತ್ತು ಮೃತ ಸಿದ್ದರಾಜು ಹಾಗೂ ಗಾಯಾಳು ಚಾಸಾ-3 ಮತ್ತು ಆರೋಪಿ ಚಿಕಿತ್ಸೆ ಪಡೆದುಕೊಂಡ ಅಪಘಾತವಹಿಯನ್ನು ಪಡೆದುಕೊಂಡು, ದಿನಾಂಕ 01-06-2024 ರಂದು ತನಿಖೆ ಪೂರ್ಣಗೊಂಡಿದ್ದರಿಂದ ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿದ್ದಾಗಿ ಸಾಕ್ಷ್ಯ ನುಡಿದಿದ್ದಾರೆ.

**19.** ಕಡತದಲ್ಲಿ ಲಭ್ಯವಿರುವ ಸಾಕ್ಷ್ಯಾಧಾರಗಳನ್ನು ಕೂಲಂಕುಷವಾಗಿ ಪರಿಶೀಲಿಸಿದಾಗ ಅಭಿಯೋಜನೆಯವರು ಆಪಾದಿಸಿದಂತೆ ಆರೋಪಿಯು ತನ್ನ ವಾಹನವನ್ನು ಅತಿವೇಗ ಮತ್ತು ಅಜಾಗರೂಕತೆಯಿಂದ ಮಾನವ ಜೀವಕ್ಕೆ ಹಾನಿಯಾಗುವ ರೀತಿಯಲ್ಲಿ ಚಲಾಯಿಸಿ ಭಾರತೀಯ ದಂಡ ಸಂಹಿತೆ ಕಲಂ 279, 337 ಮತ್ತು 304-ಎ ರೀತ್ಯಾ ಅಪರಾಧವನ್ನು ಮಾಡಿರುತ್ತಾರೆಂದು ಸಂಶಯಾತೀತವಾಗಿ ರುಜುವಾತುಪಡಿಸಲು ಅಭಿಯೋಜನೆಯವರು ವಿಫಲರಾಗಿರುತ್ತಾರೆ. ಅಭಿಯೋಜನೆಯ ಪರ ಸಾಕ್ಷಿದಾರರ ಸಾಕ್ಷ್ಯದಲ್ಲಿ ಆರೋಪಿಯ ಅತಿವೇಗ ಮತ್ತು ಅಜಾಗರೂಕತೆ ಚಾಲನೆಗೆ ಸಂಬಂಧಪಟ್ಟಂತೆ ಯಾವುದೇ ನೇರ ಆರೋಪವು ಕಂಡುಬರುತ್ತಿಲ್ಲ ಮತ್ತು ಇವರುಗಳ ಸಾಕ್ಷ್ಯವು ಅಭಿಯೋಜನೆಯ ಪ್ರಕರಣಕ್ಕೆ ಕೇವಲ ಸಾಂದರ್ಭಿಕ ಸಾಕ್ಷ್ಯವಾಗಿರುತ್ತದೆ. ಉಳಿದಂತೆ ಯಾವುದೇ ಪ್ರತ್ಯಕ್ಷದರ್ಶಿಯು ಹಾಗೂ ಇತರ ಸಾಕ್ಷಿದಾರರುಗಳು ಅಭಿಯೋಜನೆಯ ಪ್ರಕರಣವನ್ನು ಸಮರ್ಥಿಸಿರುವುದಿಲ್ಲ.

20. ಕ್ರಿಮಿನಲ್ ಪ್ರಕರಣಗಳಲ್ಲಿ ತನ್ನ ನಿಲುವನ್ನು ಯಾವುದೇ ಸಂಶಯವಿಲ್ಲದಂತೆ ನಿರೂಪಿಸುವ ಹೊಣೆಗಾರಿಕೆ ಅಭಿಯೋಜನೆಯವರ ಮೇಲೆ ಇರುತ್ತದೆ ಮತ್ತು ಸದರಿ ಅಂಶಗಳನ್ನು ಅಭಿಯೋಜನೆಯವರು ತಮ್ಮ ಸಾಕ್ಷ್ಯಗಳಿಂದ ರುಜುವಾತುಪಡಿಸಬೇಕಿರುತ್ತದೆ. ಈ ಅಂಶದ

ಬೆಳಕಿನಡಿಯಲ್ಲಿ ಅಭಿಯೋಜನೆಯವರು ಸಾದರಪಡಿಸಿದ ಸಾಕ್ಷಿದಾರರುಗಳ ಸಾಕ್ಷ್ಯವನ್ನು ಕ್ರೂಢೀಕರಿಸಿ ವಿಶ್ಲೇಷಿಸಿದಾಗ ಆರೋಪಿ ಚಾಲಕನ ಅತಿ ವೇಗದ ಅಥವಾ ನಿರ್ಲಕ್ಷತನದ ವಾಹನದ ಚಾಲನೆಯ ಬಗ್ಗೆ ಯಾವುದೇ ಅಂಶಗಳು ಹೊರ ಬಂದಿರುವುದಿಲ್ಲ. ಭಾರತೀಯ ದಂಡ ಸಂಹಿತೆ ಕಲಂ 279 ಅನ್ನು ಅನ್ವಯಿಸಬೇಕಾದರೆ ಅತಿವೇಗ ಅಥವಾ ನಿರ್ಲಕ್ಷತನದ ವಾಹನದ ಚಾಲನೆ ಬಹುಮುಖ್ಯವಾದ ಅಂಶವಾಗಿರುತ್ತದೆ. ಈ ಮೂಲಕ ಭಾರತೀಯ ದಂಡ ಸಂಹಿತೆ ಕಲಂ 279 ರ ಅವಶ್ಯಕ ಅಂಶಗಳಾದ ಅತೀ ವೇಗ ಅಥವಾ ನಿರ್ಲಕ್ಷ್ಯತನದ ವಾಹನದ ಚಾಲನೆಯನ್ನು ಸಾಬೀತುಪಡಿಸುವಲ್ಲಿ ವಿಫಲವಾಗಿರುತ್ತಾರೆ.

21. ಈ ಪ್ರಕರಣದಲ್ಲಿ ನಿಪಿ.17 ರಂತೆ ಮೋಟಾರ್ ವಾಹನ ಅಪಘಾತ ವರದಿ ಮತ್ತು ನಿಪಿ.8 ರಂತೆ ಮರಣೋತ್ತರ ಪರೀಕ್ಷಾ ವರದಿಯನ್ನು ಗುರುತಿಸಿಕೊಂಡಿದ್ದು, ಸದರಿ ನಿಪಿ.8 ದಾಖಲೆಯ ಪ್ರಕಾರ ಸಿದ್ದರಾಜುರವರು ಮರಣ ಹೊಂದಿರುತ್ತಾರೆ ಎಂಬುದನ್ನು ಉಲ್ಲೇಖಿಸಿದ್ದರೂ ಸಹ ಸದರಿ ಸಿದ್ದರಾಜುರವರ ಸಾವಿಗೆ ಆರೋಪಿ ತನ್ನ ವಾಹನವನ್ನು ಅತಿವೇಗ ಮತ್ತು ನಿರ್ಲಕ್ಷತನದಿಂದ ಚಾಲನೆ ಮಾಡಿಕೊಂಡು ಹೋಗಿ ಡಿಕ್ಕಿಪಡಿಸಿದ ಕಾರಣ ಮೃತಪಟ್ಟಿರುತ್ತಾರೆಂದು ಮೇಲೆ ಚರ್ಚಿಸಿದ ಕಾರಣಗಳ ಆಧಾರದ ಮೇರೆಗೆ ಒಪ್ಪಿಕೊಳ್ಳಲು ಬರುವುದಿಲ್ಲ.

22. ಅಪರಾಧಿಕ ಪ್ರಕರಣಗಳಲ್ಲಿ ಆರೋಪಿತನ ವಿರುದ್ಧದ ಆರೋಪಣೆಯನ್ನು ಸಂಶಯಾತೀತವಾಗಿ ಅಭಿಯೋಜನೆಯವರು ರುಜುವಾತುಪಡಿಸಬೇಕಾಗುತ್ತದೆ. ಒಂದೊಮ್ಮೆ ಅಭಿಯೋಜನೆಯ ಪರ ಸಾಕ್ಷ್ಯವನ್ನು ಪರಿಶೀಲಿಸಿದಾಗ, ಆರೋಪಿಯ ವಿರುದ್ಧದ ಆರೋಪಣೆಯ ಕುರಿತು ಯಾವುದೇ ಸಂಶಯಗಳು ಕಂಡುಬಂದಲ್ಲಿ, ಸದರಿ ಸಂಶಯದ ಲಾಭವನ್ನು ಆರೋಪಿಗೆ ನೀಡಿ ಆತನನ್ನು ನಿರಪರಾಧಿ ಎಂದು ನಿರ್ಣಯಿಸಬೇಕಾಗುತ್ತದೆ. ಈ ಮೇಲ್ಕಂಡಂತೆ ಅಭಿಯೋಜನೆಯ ಪರ ಸಾಕ್ಷಿದಾರರಾದ ಪಿರ್ಯಾದುದಾರರು, ಪ್ರತ್ಯಕ್ಷ ಸಾಕ್ಷಿದಾರರು ಹಾಗೂ ಗಾಯಾಳು ಸಾಕ್ಷಿದಾರರು ಅಪಘಾತವು ಹೇಗಾಯಿತು ಮತ್ತು ಯಾರ ತಪ್ಪಿನಿಂದ ಆಯಿತು ಎಂದು ಗೊತ್ತಿಲ್ಲವೆಂದು ಪ್ರತಿಕೂಲ ಸಾಕ್ಷ್ಯ ನುಡಿದಿರುವುದರಿಂದ ಆರೋಪಿ ತನ್ನ ವಾಹನವನ್ನು ಅತೀವೇಗ, ದುಡುಕುತನದಿಂದ ಮತ್ತು ಅಜಾಗರೂಕತೆಯಿಂದ ಚಾಲನೆ ಮಾಡಿ ಅಪಘಾತಪಡಿಸಿದ್ದಾನೆಂದು ಅಭಿಯೋಜನೆಯವರು ನಿಸ್ಸಂದೇಹವಾಗಿ, ಪ್ರಬಲವಾದ ಹಾಗೂ ಪೂರಕವಾದ ಸಾಕ್ಷ್ಯದಾರಗಳೊಂದಿಗೆ ರುಜುವಾತುಪಡಿಸುವಲ್ಲಿ ಸಂಪೂರ್ಣವಾಗಿ ವಿಫಲವಾಗಿರುತ್ತಾರೆಂದು ಕಂಡುಬಂದಿರುತ್ತದೆ.

23. ಒಟ್ಟಾರೆಯಾಗಿ ಕಡತದಲ್ಲಿ ಲಭ್ಯವಿರುವ ಮೌಖಿಕ ಮತ್ತು ದಸ್ತಾವೇಜು ಸಾಕ್ಷ್ಯದ ಆಧಾರದ ಮೇರೆಗೆ ಅಪಘಾತ ನಡೆದಿದೆ ಎನ್ನಲಾದ ದಿನದಂದು ಆರೋಪಿಯ ತಪ್ಪಿನಿಂದಲೇ ಅಪಘಾತವಾಗಿದೆ ಎಂಬ ಬಗ್ಗೆ ಸ್ಪಷ್ಟ ಸಾಕ್ಷ್ಯಾಧಾರಗಳಿಲ್ಲ ಎಂದು ಅಭಿಪ್ರಾಯಪಡುತ್ತೇನೆ. ಸೂಕ್ತ ಸಾಕ್ಷ್ಯಾಧಾರಗಳ ಗೈರುಹಾಜರಾತಿಯಲ್ಲಿ ಆರೋಪಿಯು ಅಭಿಯೋಜನೆಯು ಆಪಾದಿಸಿದಂತೆ ಅಪರಾಧವೆಸಗಿದ್ದಾರೆಂದು ಅಭಿಪ್ರಾಯಪಡಲು ಆಗುವುದಿಲ್ಲ. ಈ ಬಗ್ಗೆ ನಾನು ಮಾನ್ಯ ಗೌರವಾನ್ವಿತ ಸರ್ವೋಚ್ಛ ನ್ಯಾಯಾಲಯವು **2008(4) Crimes 241(SC) Renumallaiah V/s State of Andra Pradesh** ತೀರ್ಪನ್ನು ಅವಲಂಬಿಸಿದ್ದು, ಅದರಲ್ಲಿ ತೃಪ್ತಿದಾಯಕ ಸಾಕ್ಷ್ಯ ಇಲ್ಲದೆ ಇದ್ದರೆ ಆರೋಪಿಯನ್ನು ಶಿಕ್ಷೆಗೆ ಗುರಿಪಡಿಸಬಾರದು ಎಂದು ಅಭಿಪ್ರಾಯಪಟ್ಟಿದ್ದು ಇರುತ್ತದೆ. ಈ ಪ್ರಕರಣದಲ್ಲಿ ಆರೋಪಿಯನ್ನು ಶಿಕ್ಷೆಗೆ ಗುರಿಪಡಿಸುವಷ್ಟು ತೃಪ್ತಿದಾಯಕ ಸಾಕ್ಷ್ಯ ನ್ಯಾಯಾಲಯದ ಮುಂದೆ ಇರುವುದಿಲ್ಲ. ಪ್ರಸ್ತುತ ಪ್ರಕರಣದಲ್ಲಿ ದೋಷಾರೋಪಣಾ ಪತ್ರದಲ್ಲಿ ಪ್ರತ್ಯಕ್ಷ ಸಾಕ್ಷಿದಾರರು ಎಂದು ನಮೂದಿಸಿರುವ ಚಾಸಾ.2 ರಿಂದ 4 ರವರುಗಳು ತಮ್ಮ ಸಾಕ್ಷ್ಯದಲ್ಲಿ ತಾವು ಯಾವುದೇ ಅಪಘಾತವನ್ನು ಕಣ್ಣಾರೆ ನೋಡಿಲ್ಲ, ಅಪಘಾತ ಹೇಗೆ ಮತ್ತು ಯಾರ ತಪ್ಪಿನಿಂದ ಆಗಿರುತ್ತದೆಂದು ಗೊತ್ತಿಲ್ಲವೆಂದು ಅಭಿಯೋಜನೆಯ ಪ್ರಕರಣಕ್ಕೆ ಸಂಪೂರ್ಣ ಪ್ರತಿಕೂಲ ಸಾಕ್ಷ್ಯ ನುಡಿದಿರುತ್ತಾರೆ. ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಅವರನ್ನು ಪಾಟೀ ಸವಾಲಿಗೆ ಒಳಪಡಿಸಿದರೂ ಸಹ ಅಭಿಯೋಜನೆಯ ಪ್ರಕರಣಕ್ಕೆ ಪೂರಕವಾದ ಸಾಕ್ಷ್ಯವನ್ನು ಹೊರತರುವಲ್ಲಿ ವಿಫಲರಾಗಿರುತ್ತಾರೆ. ಉಳಿದಂತೆ ತನಿಖಾಧಿಕಾರಿಗಳಾದ ಚಾಸಾ.19 ಮತ್ತು 21 ರವರುಗಳು ಕೃತ್ಯವನ್ನು ಕಣ್ಣಾರೆ ಕಂಡಂತಹ ಸಾಕ್ಷಿದಾರರಾಗಿರುವುದಿಲ್ಲ. ಸದರಿ ಸಾಕ್ಷಿದಾರರ ಸಾಕ್ಷ್ಯವು ಮಾನ್ಯ ಅಭಿಯೋಜನೆಯ ಪ್ರಕರಣಕ್ಕೆ ಅಷ್ಟೊಂದು ಮಹತ್ವದ ಸಾಕ್ಷ್ಯಾಧಾರಗಳಾಗಿರುವುದಿಲ್ಲ. ಸದರಿ ತನಿಖಾಧಿಕಾರಿಗಳು ತಮ್ಮ ಕರ್ತವ್ಯಕ್ಕೆ ಅನುಗುಣವಾಗಿ ಸಾಕ್ಷ್ಯ ನುಡಿದಿರುತ್ತಾರೆ. ಆದ್ದರಿಂದ ಈ ಮೇಲ್ಕಂಡ ಎಲ್ಲಾ ಕಾರಣಗಳಿಂದಾಗಿ ಅಭಿಯೋಜನಾ ಪ್ರಕರಣ ಸಂಶಯಕ್ಕೆ ಎಡೆ ಮಾಡಿಕೊಟ್ಟಿರುವುದರಿಂದ ಸದರಿ ಸಂಶಯದ ಲಾಭವನ್ನು ಆರೋಪಿಗೆ ನೀಡಿ ಅವರನ್ನು ಬಿಡುಗಡೆ ಮಾಡುವುದು ಸೂಕ್ತವೆಂದು ತೀರ್ಮಾನಿಸಿ ಈ ಮೇಲ್ಕಂಡ ಅಂಶ **1** ರಿಂದ **3** ನ್ನು ನಕಾರಾತ್ಮಕವಾಗಿ ಉತ್ತರಿಸಿರುತ್ತೇನೆ.

<u>24. ಅಂಶ.**4:-**</u> ಅಂಶ ನಂ-1 ರಿಂದ 3 ರ ಮೇಲೆ ಮಾಡಿರುವ ವಿವರವಾದ ಚರ್ಚೆ ಮತ್ತು ಅದಕ್ಕೆ ನೀಡಿರುವ ಕಾರಣಗಳಿಗೆ ಅಂಶ.4 ಕ್ಕೆ ಈ ಕೆಳಗಿನಂತೆ ಆದೇಶ ಮಾಡುತ್ತೇನೆ;

<u>ಆದೇಶ</u>

ದಂಡ ಪ್ರಕ್ರಿಯಾ ಸಂಹಿತೆ ಕಲಂ 255(1)ರಡಿಯಲ್ಲಿ ಪ್ರದತ್ತವಾದ ಹಕ್ಕನ್ನು ಚಲಾಯಿಸುತ್ತಾ ಆರೋಪಿಯ ಮೇಲೆ ಹೊರಿಸಲಾಗಿದ್ದ ಭಾರತೀಯ ದಂಡ ಸಂಹಿತೆ ಕಲಂ 279, 337 ಹಾಗೂ 304(ಎ)ರಡಿ ಆರೋಪದಿಂದ ದೋಷಮುಕ್ತಗೊಳಿಸಿ ನಿರ್ದೋಷಿ ಎಂದು ನಿರ್ಣಯಿಸಿ ಬಿಡುಗಡೆಗೆ ಆದೇಶಿಸಲಾಗಿರುತ್ತದೆ.

ಆರೋಪಿ ಮತ್ತು ಜಾಮೀನುದಾರರು ಬರೆದುಕೊಟ್ಟಿರುವ ಜಾಮೀನಿಂದ ಬಾಂಡುಗಳು ಮತ್ತು ಮುಚ್ಚಳಿಕೆಗಳು 6 ತಿಂಗಳವರೆಗೆ ಜಾರಿಯಲ್ಲಿರುತ್ತದೆ.

(ಶೀಘ್ರಲಿಪಿಗಾರರಿಗೆ ಗಣಕಯಂತ್ರದ ಮುಖಾಂತರ ಉಕ್ತಲೇಖನ ಕೊಟ್ಟು ಅದನ್ನು ಪರಿಷ್ಕರಿಸಿ, ನಂತರ ಮುಕ್ತ ನ್ಯಾಯಾಲದಲ್ಲಿ ದಿನಾಂಕ 1 ನೇ ಜುಲೈ 2026 ರಂದು ತೀರ್ಪನ್ನು ತೆರೆದ ನ್ಯಾಯಾಲಯದಲ್ಲಿ ಘೋಷಿಸಲಾಯಿತು).

**(**ನಂದಿನಿ ಎಸ್**.**ಆರ್**.)**
ಎರಡನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ**.,** ಮದ್ದೂರು

<u>ಅನುಬಂಧ</u>

<u>ಅಭಿಯೋಜನಾ ಪರ ವಿಚಾರಣೆ ಮಾಡಲಾದ ಸಾಕ್ಷಿಗಳು</u>

| | | |
|---|---|---|
| ಪ್ರಾಸಾ- 1 | : | ಸಣ್ಣಮ್ಮ |
| ಪ್ರಾಸಾ- 2 | : | ಸಿದ್ದರಾಜು .ಎಸ್ |
| ಪ್ರಾಸಾ -3 | : | ಭರತೇಶ್ |
| ಪ್ರಾಸಾ -4 | : | ಕೆ.ಆರ್. ಪ್ರಸಾದ್ |
| ಪ್ರಾಸಾ -5 | : | ನಿಶಾಂತ್ |
| ಪ್ರಾಸಾ -6 | : | ಅಭಿಷೇಕ್ |

<u>**2.** ಅಭಿಯೋಜನಾ ಪರ ಹಾಜರುಪಡಿಸಿದ ದಾಖಲೆಗಳು</u>

| | | |
|---|---|---|
| ನಿಶಾನೆ ಪಿ.1 | : | ದೂರು |
| ನಿಶಾನೆ ಪಿ.1(ಎ ) | : | ಸಹಿ |
| ನಿಶಾನೆ ಪಿ.2 | : | ಪಿರ್ಯಾದುದಾರರ ಮುಂದುವರೆದ ಹೇಳಿಕೆ |
| ನಿಶಾನೆ ಪಿ.3 | : | ಪ್ರಥಮ ವರ್ತಮಾನ ವರದಿ |
| ನಿಶಾನೆ ಪಿ.3(ಎ) | : | ಸಹಿ |
| ನಿಶಾನೆ ಪಿ.4 | : | ಸ್ಥಳ ಮಹಜರ್ |
| ನಿಶಾನೆ ಪಿ.4(ಎ ಯಿಂದ ಡಿ) | : | ಸಹಿಗಳು |
| ನಿಶಾನೆ ಪಿ.5 | : | ಅಮಾನತ್ತು ಮಹಜರ್ |

| | | |
|---|---|---|
| ನಿಶಾನೆ ಪಿ.5(ಎ ಯಿಂದ ಡಿ): | | ಸಹಿಗಳು |
| ನಿಶಾನೆ ಪಿ.6 | : | ಹೇಳಿಕೆ |
| ನಿಶಾನೆ ಪಿ.7 | : | ಮುಂದುವರೆದ ಹೇಳಿಕೆ |
| ನಿಶಾನೆ ಪಿ.8 | : | ಶವ ಪರೀಕ್ಷಾ ವರದಿ |
| ನಿಶಾನೆ ಪಿ.8(ಎ) | : | ಸಹಿ |
| ನಿಶಾನೆ ಪಿ.9 | : | ನೋಟೀಸ್ |
| ನಿಶಾನೆ ಪಿ.9(ಎ) | : | ಸಹಿ |
| ನಿಶಾನೆ ಪಿ.10 | : | ಪ್ರತ್ಯುತ್ತರ |
| ನಿಶಾನೆ ಪಿ.10(ಎ) | : | ಸಹಿ |
| ನಿಶಾನೆ ಪಿ.11 ಮತ್ತು 12: | | ನೋಟೀಸ್ ಗಳು |
| ನಿಶಾನೆ ಪಿ.11(ಎ) ಮತ್ತು 12(ಎ): ಸಹಿಗಳು | | |
| ನಿಶಾನೆ ಪಿ.13 | : | ಗಾಯದ ಪ್ರಮಾಣ ಪತ್ರ |
| ನಿಶಾನೆ ಪಿ.13(ಎ) | : | ಸಹಿ |
| ನಿಶಾನೆ ಪಿ.14 | : | ಎಂ ಎಲ್ ಸಿ ರಿಜಿಸ್ಟರ್ |
| ನಿಶಾನೆ ಪಿ.14(ಎ) | : | ಸಹಿ |
| ನಿಶಾನೆ ಪಿ.15 | : | ಗಾಯದ ಪ್ರಮಾಣ ಪತ್ರ |
| ನಿಶಾನೆ ಪಿ.15(ಎ) | : | ಸಹಿ |
| ನಿಶಾನೆ ಪಿ.16 | : | ಎಂ ಎಲ್ ಸಿ ರಿಜಿಸ್ಟರ್ |
| ನಿಶಾನೆ ಪಿ.16(ಎ) | : | ಸಹಿ |
| ನಿಶಾನೆ ಪಿ.17 | : | ಐ ಎಂ ವಿ ವರದಿ |
| ನಿಶಾನೆ ಪಿ.17(ಎ) | : | ಸಹಿ |
| ನಿಶಾನೆ ಪಿ.18 | : | ಇಂಡೆಮ್ನಿಟಿ ಬಾಂಡ್ |
| ನಿಶಾನೆ ಪಿ.18(ಎ) | : | ಸಹಿ |
| ನಿಶಾನೆ ಪಿ.19 | : | ಹೇಳಿಕೆ |
| ನಿಶಾನೆ ಪಿ.20 | : | ಮುಂದುವರೆದ ಹೇಳಿಕೆ |
| ನಿಶಾನೆ ಪಿ.21 | : | ಹೇಳಿಕೆ |
| ನಿಶಾನೆ ಪಿ.22 | : | ಮುಂದುವರೆದ ಹೇಳಿಕೆ |

**3.** ಆರೋಪಿ ಪರ ವಿಚಾರಣೆ ಮಾಡಲಾದ ಸಾಕ್ಷಿಗಳು

-ಇಲ್ಲ-

**4.** ಆರೋಪಿ ಪರ ಹಾಜರುಪಡಿಸಿದ ದಾಖಲೆಗಳು

-ಇಲ್ಲ-

**5.** <u>ಸಾಕ್ಷಿ ಕಾಲಕ್ಕೆ ಗುರುತಿಸಲಾದ ಮುದ್ದೇಮಾಲುಗಳು</u>

-ಇಲ್ಲ-

**(ಶ್ರೀಮತಿ ನಂದಿನಿ ಎಸ್.ಆರ್.)**
**2** ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ., ಮದ್ದೂರು